ಗಮನಕ್ಕೆ ಬಂದಿದೆ.

ಬೆಳಗಾಂ ಜಿಲ್ಲಾಪಂಚಾಯತ್‌ಗೆ, ಸಂಬಂಧಿಸಿದಂತೆ ಮುನ್ಸೂಚನೆ ಇಲ್ಲದೆ ತನಿಖೆಗಳನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ವಿಷಯ : – ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಹಣ್ಣಿನ ಸಸಿಗಳನ್ನು ಹಂಚುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 345(496)

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಈ ವರ್ಷ ಯಾವಯಾವ ಹಣ್ಣಿನ ಗಿಡಗಳನ್ನು ವಿತರಣೆ ಮಾಡಲಾಗಿದೆ ಹಾಗೂ ಎಷ್ಟು ಗಿಡಗಳನ್ನು ವಿತರಣೆ ಮಾಡಲಾಗಿದೆ?

ಆ) ಸಾರ್ವಜನಿಕರಿಗೆ ಉತ್ತಮ ತಳಿಯ ತೆಂಗಿನ ಸಸಿಗಳು ಲಭ್ಯವಾಗುತ್ತಿರುವುದಿಲ್ಲ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಉತ್ತಮ ತಳಿಯ ತೆಂಗಿನ ಸಸಿಗಳನ್ನು ಬೇರೆ ಕಡೆಯಿಂದ ತರಿಸಿ ಸಾರ್ವಜನಿಕರಿಗೆ ವಿತರಣೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಈ) ಬೆಳಗಾವಿ ಜೆಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯವರು ಯಾವಯಾವ ತರಹದ ಸಸಿಗಳನ್ನು ಹಾಗೂ ಎಷ್ಟೆಷ್ಟು ತರಹದ ಹಣ್ಣಿನ ಸಸಿಗಳನ್ನು ತಯಾರು ಮಾಡಿರುತ್ತಾರೆ?

ಉ) ಕೇವಲ ವೆಸ್ಟನ್ ಘಾಟಿನಲ್ಲಿ ಬರುವ ಹಾಗೂ ಎಸ್.ಸಿ. ಎಸ್.ಟಿ ಜನರಿಗೆ ಮಾತ್ರ ಈ ಸಸಿಗಳನ್ನು ಮಾರಾಟ ಮಾಡಲಾಗುತ್ತಿದ್ದು ಸಾರ್ವಜನಿಕರು ಹಣ ಕೊಡಲು ತಯಾರಾಗಿದ್ದರೂ ಸಹ ಅವರಿಗೆ ಸಸಿಗಳು ಲಭ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ)ಹಾಗಿದ್ದಲ್ಲಿ ಸಾರ್ವಜನಿಕರಿಗೂ ಸಹ ಎಲ್ಲಾ ತರಹದ ಹಣ್ಣಿನ ಸಸಿಗಳನ್ನು ಯೋಗ್ಯ ದರದಲ್ಲಿ ಮಾರಾಟ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :-

ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ 1993-94ನೇ ಸಾಲಿನಲ್ಲಿ ಜುಲೈ ಮಾಹೆಯ ಅಂತ್ಯದವರೆಗೆ ಈ ಕೆಳಕಂಡ ಹಣ್ಣಿನ ಮತ್ತು ಇತರೆ ಗಿಡಗಳನ್ನು ವಿತರಿಸಲಾಗಿದೆ.(1-4-93 ರಿಂದ 31-7-1993) ರಜಾದಿನಗಳನ್ನು ಹೊರತುಪಡಿಸಿ, ಮೇಲ್ಕಾಣಿಸಿರುವ ಅವಧಿಯಲ್ಲಿ ಗಿಡಗಳನ್ನು ವಿತರಿಸಲಾಗಿದೆ.

1.	ಮಾವಿನ ಕಸಿಗಿಡಗಳು	26,699
2.	ಸೀಬೆ ಕಸಿಗಿಡಗಳು	1,175
3.	ಸಪೋಟ ಕಸಿಗಿಡಗಳು	14,470
4.	ದಾಳಿಂಬೆ ಗೂಟಿಗಳು	3,900
5.	ನಿಂಬೆ ಸಸಿಗಳು	5,810

6.	ಬಾರ್ ಹಣ್ಣುಗಳು	11,500
7.	ಕರಿಬೇವು	8,302
8.	ಏಲಕ್ಕಿ	182
9.	ಗೋಡಂಬಿ ಗಿಡಗಳು	7,500
10	ಪರಂಗಿ	1,400
11.	ತೆಂಗಿನ ಗಿಡಗಳು	22,211
	ಒಟ್ಟು	**1,03,149**

ಇಲ್ಲ

ಈ ಇಲಾಖೆಯ ಮೂಲಕ ರಾಜ್ಯದಲ್ಲಿ ವಿತರಿಸಿದ ತೆಂಗಿನ ಸಸಿಗಳು ಉತ್ತಮ ತಳಿಯದಾಗಿದ್ದು ಉತ್ತಮ ಗುಣಮಟ್ಟ ಹೊಂದಿದೆ. "ಅರಸಿಕೆರೆ ಟಾಲ್" ತಳಿಯ ಗುಣಮಟ್ಟದ ಕಾಯಿಗಳಿಂದ ಉತ್ಪಾದಿಸಿದ ಸಸಿಗಳನ್ನು ಇಲಾಖೆ ಅನೇಕ ವರ್ಷಗಳಿಂದ ರೈತರಿಗೆ ವಿತರಿಸುತ್ತಿದೆ. ಈ ಬಗ್ಗೆ ಸಾರ್ವಜನಿಕರಿಂದ ಇಲ್ಲಿಯವರೆಗೆ ಯಾವುದೇ ತಕರಾರು ಬಂದಿರುವುದಿಲ್ಲ. ಇಲಾಖೆಯಿಂದ ವಿತರಿಸಲಾಗುತ್ತಿರುವ ಪ್ರತಿ ಸಸಿಯನ್ನು ಸಮರ್ಪಕವಾಗಿ ತಜ್ಞರಿಂದ ಪ್ರಮಾಣೀಕರಿಸಿ (ಸರ್ಟಿಫೈಡ್ ಮಾಡಿ) ವಿತರಿಸುವ ಪದ್ಧತಿ ಇರುವ ಕಾರಣ ಕೀಳುಗುಣಮಟ್ಟದ ಸಸಿಗಳು ವಿತರಣೆಯಾಗುತ್ತಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಈ ಕೆಳಕಾಣಿಸಿದ ಹಣ್ಣಿನ ಸಸಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತುದೆ.

1.	ಮಾವಿನ ಅಪ್ರೋಚ್ ಕಸಿ	17,529
2.	ಮಾವಿನ ಓಟೆ ಕಸಿ	1,300
3.	ಸೀಬೆ ಕಸಿ ಗಿಡಗಳು	1,650
4.	ದಾಳಿಂಬೆ	3,900
5.	ನಿಂಬೆ	6,050
6.	ಪರಂಗಿ	5,018
7.	ಮಾವಿನ ಕಂತ್ರಿಗಿಡಗಳು	24,554
8.	ನಿಂಬೆ ಕಂತ್ರಿ ಗಿಡಗಳು	3,200
9.	ಕರಿಬೇವು	10,000

ಇದಲ್ಲದೆ ಈ ಕೆಳಕಾಣಿಸಿದ ಸಸಿಗಳನ್ನೂ ಸಹ ಉತ್ಪಾದಿಸಲಾಗುತ್ತದೆ.

1.	ಅಲಂಕಾರಿಕ ಮರಗಳ ಸಸಿಗಳು	5,000
2.	ಹೂವಿನ ಗಿಡಗಳು(ಕುಂಡಗಳಲ್ಲಿ)	8,000
3.	ತರಕಾರಿ ಸಸಿಗಳು	1,00,000
	ಒಟ್ಟು	**1,13,000**

ಇಲ್ಲ. ಎಸ್.ಸಿ., ಎಸ್.ಟಿ.ಯವರಲ್ಲದೆ ಇತರರಿಗೂ ಸಹ ಸಸಿಗಳನ್ನು ಈ ಯೋಜನೆಯಡಿ ವಿತರಿಸಲಾಗುತ್ತಿದೆ.

ಸಸಿ ಗಿಡಗಳನ್ನು ಸಾರ್ವಜನಿಕರಿಗೆ ಈಗಾಗಲೇ ಮಾರಾಟ ಮಾಡುವ ಪದ್ಧತಿ

ಜಾರಿಯಲ್ಲಿರುತ್ತದೆ.

ವಿಷಯ : -ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಮಂಡಲ ಪಂಚಾಯತಿಯಲ್ಲಿ ಕೆಲಸ ಮಾಡಲು ನೌಕರದಾರರನ್ನು ನೇಮಿಸಿಕೊಳ್ಳುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ346(405)

ಶ್ರೀ ಶಿವಾನಂದ ಹೆಚ್. ಕೌಜಲಗಿ(ಬೈಲಹೊಂಗಲ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡಲಪಂಚಾಯಿತಿಯ ಅಧೀನದಲ್ಲಿ ಬರುವ ಕೆಲಸಗಳನ್ನು ಮಂಡಲಗಳಲ್ಲಿ ಮಾಡಲು ಯಾವುದೇ ನೌಕರರನ್ನು ನೇಮಿಸಿಕೊಳ್ಳಬಾರದೆಂದು ತಡೆಯಿರುವುದರಿಂದ ಮಂಡಲ ಪಂಚಾಯಿತಿಗಳಲ್ಲಿ ಕೆಲಸ ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ಹೋಗಲಾಡಿಸಲು ಸರಕಾರದವರು ಕ್ರಮವನ್ನೇನಾದರೂ ಕೈಕೊಂಡಿರುವರೇ ; ಹಾಗಿಲ್ಲದಿದ್ದಲ್ಲಿ ಎಷ್ಟು ದಿವಸಗಳೊಳಗಾಗಿ ಕ್ರಮ ಕೈಕೊಳ್ಳಲಾಗುವುದು ;

ಇ) ಈ ಮೇಲೆ ತಿಳಿಸಲಾದ ಕೆಲಸಗಳನ್ನು ಮಾಡಲು ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ನೌಕರರನ್ನು ನೇಮಿಸಿಕೊಳ್ಳಬೇಕೆಂಬ ಸಲಹೆ ಏನಾದರೂ ಸರಕಾರದ ಮುಂದಿದೆಯೇ?

ಶ್ರೀ ಎಂ.ವೈ. ಘೋರ್ಪಡೆ

(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಇಲ್ಲ. ಆದಾಗ್ಯೂ ಅಗತ್ಯ ಯೋಜನೆಗಳ ನಿರ್ವಹಣೆ ಬಗ್ಗೆ ಆಡಳಿತಾತ್ಮಕ ಸೂಚನೆಗಳನ್ನು ಕೊಡಲಾಗಿದೆ.

ಆ) ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಗುತ್ತಿಗೆ ಕೆಲಸದ ಆಧಾರದ ಮೇಲೆ ಲಭ್ಯ ವಿರುವ ಸಿಬ್ಬಂದಿ ಮೂಲಕ ಮಂಡಲ ಪಂಚಾಯತಿಗಳು ನಿರ್ವಹಿಸಬೇಕಾಗುತ್ತದೆ. ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆ 1993ರ ಕಲಂ 112 ಮತ್ತು 113ರ ಅಡಿಯಲ್ಲಿ ಗ್ರಾಮಪಂಚಾಯತಿಗಳ ಸಿಬ್ಬಂದಿಯನ್ನು ನೇಮಕಾತಿ ಮಾಡುವ ಬಗ್ಗೆ ನಿಯಮಗಳನ್ನು ರಚಿಸಲಾಗುತ್ತಿದೆ.

ಇ) -ಇಲ್ಲ-

ವಿಷಯ : - ರಾಜ್ಯದಲ್ಲಿರುವ ತಾಲ್ಲೂಕು ತಹಶೀಲ್ದಾರರಿಗೆ ವಸತಿಗೃಹ ನಿರ್ಮಿಸುವ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 349(24)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಸಂಕೇಶ್ವರ)

ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ತಾಲ್ಲೂಕು ತಹಶೀಲ್ದಾರರ ಸಂಖ್ಯೆ ಎಷ್ಟು?

ಆ) ಅವರುಗಳಿಗೆ ಸರ್ಕಾರಿ ವಸತಿಗೃಹ ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮ ಏನು?

ಇ) ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ತಹಶೀಲ್ದಾರರಿಗೆ ವಾಸ ಮಾಡಲು ವಸತಿಗೃಹ ಒದಗಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?